ಪಿಡಬ್ಲ್ಯೂಃ 4

ಸಿ.ಡಬ್ಲ್ಯೂಃ4

# ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. 118/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ಈಶ್ವರ |
| ತಂದೆಯ ಹೆಸರು | : | ಕುಸ್ಲು ಗೌಡ |
| ವಯಸ್ಸು | : | 25 ವರ್ಷ |
| ಉದ್ಯೋಗ | : | ಕೂಲಿ |
| ವಾಸ್ತವ್ಯ | : | ಅಂಕೋಲಾ |

ಸತ್ಯ ಪ್ರತಿಜ್ಞೆಯ ಮೇರೆಗೆಃ 10-08-2022

## ದಂಡ ಪ್ರಕ್ರಿಯೇ ಸಂಹಿತೆ ಕಲಂ. 299 ರಡಿ ಸಾಕ್ಷಿಯ ಹೇಳಿಕೆಃ

**ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನನಗೆ ಚಾಸಾ-5 ರವರ ಪರಿಚಯ ಇರುತ್ತದೆ. ಪೊಲೀಸರು ನನ್ನನ್ನು ಎಲ್ಲೂ ಕರೆಸಿಲ್ಲ ಮತ್ತು ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ಯಾವುದೇ ಬಂಗಾರದ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ. ಪಂಚನಾಮೆಗೆ ಸುಮಾರು 7 ವರ್ಷಗಳ ಹಿಂದೆ ಪೊಲೀಸ್ ಠಾಣೆಯಲ್ಲಿ ಸಹಿ ಹಾಕಿದ್ದೆ. ಪಂಚನಾಮೆ ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ಅದರಲ್ಲಿ ಬರೆದ ವಿಷಯ ಗೊತ್ತಿಲ್ಲ.

**(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟಿ ಸವಾಲುಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ದಿಃ 06-02-2017 ರಂದು ಪೊಲೀಸರು ನನ್ನನ್ನು ಮತ್ತು ಚಾಸಾ-5 ರವರನ್ನು 7 ನೇ ಆರೋಪಿಯ ಹೇಳಿಕೆಯ ಮೇರೆಗೆ 7 ನೇ ಆರೋಪಿ ಕರದುಕೊಂಡು ಹೋದಂತೆ

ಪಿಡಬ್ಲ್ಯೂ: 4<br>ಸಿ.ಡಬ್ಲ್ಯೂ:4

ಹುಬ್ಬಳ್ಳಿಯ ನವನಗರದ ಮನೆ ನಂ. ಎ.ಐ.ಜಿ–419 ಗೆ ಕರೆದುಕೊಂಡು ಹೋಗಿ ಅದರ ಮಾಲೀಕನಾದ ಚಾಸಾ.12 ರವರು ಕಳುವಿಗೆ ಸಂಬಂಧಪಟ್ಟ ನಾಲ್ಕು ಬಂಗಾರದ ಪಾಟ್ಲಿ ಬಳೆ, ನಾಲ್ಕು ಬಂಗಾರದ ಡಿಸೈನ್ ಬಳೆ, ಒಂದು ಬಂಗಾರದ ಲಕ್ಷ್ಮಿ ಹಾರ, ಒಂದು ಬಂಗಾರದ ಹರಳಿನ ನೆಕ್ಲೇಸ್, ಒಂದು ಬಂಗಾರದ ಹಾರ, ಎರಡು ಬಂಗಾರದ ಕರಿಮಣಿ ಬಳೆಗಳು, ಒಂದು ಬಂಗಾರದ ಉಂಗುರಗಳನ್ನು 7 ನೇ ಆರೋಪಿ ನನಗೆ ಕೊಟ್ಟಿದ್ದು ಅವುಗಳ ಪೈಕಿ ಬಂಗಾರದ ಹಾರವನ್ನು ನಾನು ಕರಗಿಸಿರುವುದಾಗಿ ಹೇಳಿ ಅವುಗಳನ್ನು ಹಾಜರುಪಡಿಸಿದಾಗ ಪಂಚನಾಮೆ ಮಾಡಿ ಅವುಗಳನ್ನು ವಶಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಪಂಚನಾಮೆ ಮಾಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ<br>Sd/-<br>ಮುಖ್ಯ ನಾಯಿಕ ದಂಡಾಧಿಕಾರಿಗಳು,<br>ಕಾರವಾರ